ಓ ಎಸ್ ನಂ.**302/2016**

ಪಿ ಡಬ್ಲ್ಯೂ-**1**

**ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ದಿನಾಂಕಃ **25-03-2021.**

ಮುಂದುವರೆದ ಪಾಟೀ ಸವಾಲು :- ಶ್ರೀ ಬಿ ವಿ ವಿ ವಕೀಲರಿಂದ

ಓ ಎಸ್ 375/1989 ರಲ್ಲಿ 6 ಗುಂಟೆ ಸ್ವತ್ತು ಇದೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ದಾವೆಯು ಕಾಲಮಿತಿಯ ಆಧಾರದ ಮೇಲೆ ವಜಾ ಆಗಿದೆ ಎಂದರೆ ಸರಿಯಲ್ಲ. ರಿಟ್ ಅರ್ಜಿಯಲ್ಲಿ ಈ ದಾವೆಯಕು ಪ್ರತಿವಾದಿಗಳು ಹಾಜರಾಗದ ಕಾರಣ ಕೆಳ ನ್ಯಾಯಾಲಯದ ತೀರ್ಪನ್ನು ದೃಢೀಕರಿಸಿದ್ದಾರೆ ಎಂದರೆ ಸರಿ . ಈ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಜಯಲಕ್ಷ್ಮಿ ಎಂಬುವವರ ವಿರುದ್ಧ ಓ ಎಸ್ ನಂ. 626/2017 ನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾಗರಾಜು ರವರ ವಿರುದ್ಧವು ಸಹ ಓ ಎಸ್ ನಂ.38/2006 ನ್ನು ಸಲ್ಲಿಸಿದ್ದೇನೆಂದರೆ ಸರಿ . ನನ್ನ ಸ್ವತ್ತನ್ನು ಅಳತೆಮಾಡಲು ನನ್ನ ತಕರಾರು ಇದೆ . ಕಾರಣ ಈಗಾಗಲೇ ಹೊಳೇನರಸೀಪುರದ ನ್ಯಾಯಾಲಯದ ಆದೇಶದ ಮೇರೆಗೆ ಅಳತೆಯಾಗಿದೆ ಎಂದು ನುಡಿಯುತ್ತಾರೆ . ಸದರಿ ಅಳತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೆ. ಅಳತೆಮಾಡಿದರೆ ಸತ್ಯಾಂಶ ತಿಳಿಯುತ್ತದೆಂದು ಅಳತೆಗೆ ತಕರಾರು ಇದೆ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ .

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**(ಎಸ್.ಚಿನ್ನಸ್ವಾಮಿ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.